ನಕ್ಷತ್ರ ಪಟ

# ಪುಟ್ಟಿಯ ಹೊಟ್ಟೆ ತುಂಬಿ ಹೋಯಿತು




## ತಮ್ಮಣ್ಣ ಬೀಗಾರ

ಕಲೆ: ಸಂತೋಷ್ ಸಸಿಹಿತ್ಲು


'ಪುಟ್ಟಿ ಪುಟ್ಟಿ' ಎಂದು ಅಪ್ಪ ಕರೆದರು. ಅಪ್ಪ ಯಾಕೆ ಕರೆಯುತ್ತಿದ್ದಾರೆ ಎಂದೆನಿಸಿತು ಪುಟ್ಟಿಗೆ. ಅವಳು ಬಣ್ಣ ಬಣ್ಣದ ಚಿತ್ರ ಇರುವ ಚಿತ್ರಪುಸ್ತಕ ಓದುತ್ತಿದ್ದಳು. ಅವಳಿಗೆ ಪುಟ್ಟ ಪುಟ್ಟ ಕಥೆ ಓದುವುದು ಚಿತ್ರ ನೋಡುವುದು ತುಂಬಾ ಇಷ್ಟ. ಅಣ್ಣ ನಿನ್ನೆಯ ದಿವಸ ಅಮ್ಮನ ಸಂಗಡ ಯಾವುದೋ ನೆಂಟರ ಮನೆಗೆ ಹೋಗಿದ್ದಾನೆ. ಹಾಗಾಗಿ, ಅಪ್ಪ ಮತ್ತು ಪುಟ್ಟಿ ಇಬ್ಬರೇ ಮನೆಯಲ್ಲಿ ಇದ್ದಾರೆ.

ಪುಟ್ಟಿಯ ಅಣ್ಣ ತುಂಬಾ ತುಂಟ. ದೋಸೆ ಮಾಡಿದರೆ ಚಪಾತಿ ಬೇಕು ಎನ್ನುತ್ತಾನೆ. ಚಪಾತಿ ಮಾಡಿದಾಗ ಅಂಗಡಿಯಿಂದ ಬನ್ ತಂದು ಕೊಡಿ ಎಂದು ಹಟ ಮಾಡುತ್ತಾನೆ. ಅಪ್ಪನಿಗೆ ಒಮ್ಮೊಮ್ಮೆ ಪುಟ್ಟಿಯ ಅಣ್ಣನ ಮೇಲೆ ಬಹಳ ಸಿಟ್ಟು ಬರುತ್ತದೆ. ಪುಟ್ಟಿಗೂ ಅವನು ಕೀಟಲೆ ಮಾಡುತ್ತಲೇ ಇರುತ್ತಾನೆ. ಪುಟ್ಟಿಯ ಪುಟ್ಟ ಜಡೆ ಎಳೆಯುವುದು, ಅವಳ ಸ್ಕೂಲ್ ಬ್ಯಾಗಿನ ಯಾವುದೋ ವಸ್ತು ಅಡಗಿಸಿಡುವುದು ಹೀಗೆ ಮಾಡುತ್ತಲೇ ಇರುತ್ತಾನೆ. ಪುಟ್ಟಿಗೆ ಅವನ ಕೀಟಲೆ ಸಿಟ್ಟು ತರಿಸುತ್ತಾದರೂ ಅಣ್ಣ ಮನೆಯಲ್ಲಿ ಇರದಿದ್ದರೆ ಏನೋ ಬೇಜಾರೆನಿಸುತ್ತದೆ.

ನಿನ್ನೆ ನೆಂಟರ ಮನೆಗೆ ಹೊರಡುವಾಗ ಅಮ್ಮ, 'ನಾನು ಪುಟ್ಟಿಯನ್ನು ಕರೆದುಕೊಂಡು ಹೋಗುತ್ತೇನೆ' ಎಂದಿದ್ದಳು. ಆದರೆ, ಅಪ್ಪ ಕೇಳಲಿಲ್ಲ 'ನೀನು ಪುಟ್ಟಿಯ ಅಣ್ಣನನ್ನೇ ಕರೆದುಕೊಂಡು ಹೋಗು, ಅವನನ್ನು ಇಟ್ಟುಕೊಳ್ಳಲು ನನ್ನಿಂದ ಆಗದು' ಎಂದು ಗಟ್ಟಿಯಾಗಿ ಹೇಳಿದಾಗ ಅಮ್ಮ ಪುಟ್ಟಿಯನ್ನು ಮನೆಯಲ್ಲಿ ಅಪ್ಪನೊಂದಿಗೆ ಬಿಟ್ಟು ಅಣ್ಣನನ್ನು ಕರೆದುಕೊಂಡು ಹೋದಳು.

'ಪುಟ್ಟಿ ಕರೆದದ್ದು ಕೇಳಿಲ್ಲವಾ, ಏನು ಮಾಡುತ್ತಾ ಇದ್ದೀಯ... ಇಲ್ಲಿ ಬಾ' ಎಂದು ಅಪ್ಪ ಮತ್ತೆ ಕರೆದರು. ಏನೇನೋ ಯೋಚಿಸುತ್ತ ಅಪ್ಪ ಕರೆದದ್ದು ಮರೆತುಬಿಟ್ಟಿದ್ದೆ ಎಂದುಕೊಳ್ಳುತ್ತಾ, ಅಪ್ಪ ಇದ್ದಲ್ಲಿಗೆ ಹೋದಳು. ಅಪ್ಪ ಕುರ್ಚಿ ಮೇಲೆ ಪೇಪರ್ ಓದುತ್ತಾ ಕುಳಿತಿದ್ದರು. 'ಪುಟ್ಟಿ ನಿನ್ನದು ಏನೂ ಗದ್ದಲ ಇಲ್ಲ, ಅಣ್ಣ ಇದ್ದರೆ ಎಷ್ಟು ಗದ್ದಲ ಮಾಡುತ್ತಿದ್ದ... ಅವನ ಗದ್ದಲ ನನಗೂ ರೂಢಿಯಾಗಿದೆ. ಆಂ, ನೀನು ಯಾವಾಗಲೂ ಆ ತಿಂಡಿ ಬೇಕು, ಈ ತಿಂಡಿ ಬೇಕು ಅಂತ ರಗಳೆ ಮಾಡಿಲ್ಲ. ತಗೋ ಈ ಇಪ್ಪತ್ತು ರೂಪಾಯಿ. ಚಾಕಲೇಟ್ ತೆಗೆದುಕೊಂಡು ಬಂದು ತಿನ್ನು' ಎನ್ನುತ್ತಾ ಇಪ್ಪತ್ತು ರೂಪಾಯಿ ನೋಟು ಚಾಚಿದರು. 'ಬೇಡ ಅಪ್ಪ' ಎಂದು ಹೇಳಿದರೂ ಒಳಗೊಳಗೆ ಖುಷಿಯಾಯಿತು ಪುಟ್ಟಿಗೆ. 'ನಿಜವಾಗಲೂ ಚಾಕಲೇಟ್ ತಂದು ತಿನ್ನಬೇಕಾ?' ಎಂದು ಆಶ್ಚರ್ಯವೆಂಬಂತೆ ಮುಖ ಮಾಡಿ ಕೇಳಿದಳು. 'ತಗೋ, ಆದರೆ, ದಿನಾ ಕೇಳಬಾರದು ಮತ್ತೆ' ಎಂದು ನೋಟನ್ನು ಪುಟ್ಟಿಯ ಕೈಯಲ್ಲಿ ಹಿಡಿಸಿದರು. ಪುಟ್ಟಿಗೆ ಖುಷಿಯಾಯಿತು. ಪುಟ್ಟಿಯ ಮನೆಯಿಂದ ಅಂಗಡಿ ಸ್ವಲ್ಪ ದೂರದಲ್ಲಿದೆ. ಅವಳು ಕಾಲಿಗೆ ಚಪ್ಪಲಿ ಸಿಕ್ಕಿಸಿಕೊಂಡು ಒಂದು ರೀತಿ